**ಸಂಪಾದಕೀಯ**

# ಪಿ. ಆರ್.ರಾಮಯ್ಯ

ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡನಾಡಿನಲ್ಲಿ ಹಲವು ಹಿರಿಯ ಪ್ರತಿಭಾವಂತ ಲೇಖಕರು ಪತ್ರಿಕೋದ್ಯಮದ ಮೂಲಕ ಜನಜಾಗೃತಿ ಉಂಟು ಮಾಡಿದರು. ಅದರ್ಶ ಜೀವನ ಹಾಗೂ ಮಾರ್ಗದರ್ಶಕ ಚಟುವಟಿಕೆ ಮೂಲಕ ಖ್ಯಾತರಾದರು. ಅವರಲ್ಲಿ ಮೈಸೂರಿನ "ತಾಯಿನಾಡು" ಪತ್ರಿಕೆಯ ಪಿ.ಆರ್.ರಾಮಯ್ಯ ಶ್ರೇಷ್ಠರ ಸಾಲಿನಲ್ಲಿ ಸೇರುತ್ತಾರೆ.

1894ರಲ್ಲಿ ಹಾಲಹಳ್ಳಿಯಲ್ಲಿ ಜನಿಸಿದ ಅವರು ಮೈಸೂರು ಹಾಗೂ ಕಾಶಿಯಲ್ಲಿ ಶಿಕ್ಷಣ ಪಡೆದವರು. 1927ರಲ್ಲಿ ಮೈಸೂರಿನಲ್ಲಿ "ತಾಯಿನಾಡು" ಪತ್ರಿಕೆ ಪ್ರಾರಂಭಿಸಿದರು. ರಾಷ್ಟ್ರೀಯ ಭಾವನೆಯುಳ್ಳ ಪತ್ರಿಕೆಯಾಗಿ ಮೈಸೂರು ಸಂಸ್ಥಾನದಲ್ಲಿ ಅಲ್ಲದೆ ಇತರ ಕಡೆಗಳಲ್ಲೂ ಇದು ಮೂರು ದಶಕಗಳ ಕಾಲ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಜನಪ್ರೀಯತೆ ಹೊಂದಿದ ಪ್ರಭಾವ ಶಾಲಿ ಪತ್ರಿಕೆಯಾಗಿತ್ತು. ಸ್ವಾತಂತ್ರ್ಯಾಂದೋಲನದ ಕೊನೆಯ ಭಾಗದಲ್ಲಂತೂ ಇದ್ದ ವ್ಯವಸ್ಥೆಯಲ್ಲೇ ಮಿಂಚಿನ ವೇಗದಲ್ಲಿ ಸುದ್ದಿ ಬಿತ್ತರಿಸಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತಿತ್ತು.

ಪಿ.ಆರ್.ರಾಮಯ್ಯನವರಿಗೆ ಪತ್ರಿಕೆ ಮಾಹಿತಿಯನ್ನೂ ನೀಡಬೇಕು, ಶಿಕ್ಷಣವನ್ನೂ ನೀಡಬೇಕು ಎಂಬ ಆಶಯ ಪತ್ರಿಕೆಯಲ್ಲಿ ಪ್ರಕಟವಾಗುವ ಎಲ್ಲ ವಿಷಯಗಳು ಸತ್ಯವಾಗಿರಬೇಕು. ಸರಳ ಭಾಷೆಯಲ್ಲಿರಬೇಕು. ಪತ್ರಿಕೋದ್ಯಮದ ಘನತೆ, ಗೌರವವನ್ನು ಎತ್ತಿ ಹಿಡಿಯುವುದರಲ್ಲಿ "ತಾಯಿ ನಾಡು" ಮುಂದಾಗಿದ್ದು ಪತ್ರಿಕಾ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಿತ್ತು. ಶ್ರೀಯುತ ರಾಮಯ್ಯನವರು ಸರಕಾರದ ಕೃಪಾಕಟಾಕ್ಷಕ್ಕೆ ಒಳಗಾದವರಲ್ಲ. ತನ್ನ ಸಿಬ್ಬಂದಿಗಳಿಗೂ "ತಾಯಿನಾಡು" ಹೆಸರು ಹೇಳಿಕೊಂಡು ಸ್ವಲಾಭ ಪಡೆಯಬಾರದು ಎಂದು ಎಚ್ಚರಿಕೆ ನೀಡುತ್ತಿದ್ದರು.

ಪತ್ರಿಕೋದ್ಯಮದ ಧೋರಣೆಯಂತೆ ಓದುಗರಿಗೆ ಸುದ್ದಿ, ಶಿಕ್ಷಣ, ಮನರಂಜನೆಗೆ ಆದ್ಯತೆ ನೀಡಿದ ಪತ್ರಿಕೆಯಲ್ಲಿ ಸಾಮಾಜಿಕ ಸುದ್ದಿಗಳೊಂದಿಗೆ ಕ್ರೀಡಾವಾರ್ತೆ, ಹವಾಮಾನ ವರದಿ , ಚಿನ್ನಬೆಳ್ಳಿ ಧಾರಣೆ, ಸಂಗೀತ, ನಾಟಕ, ಚಲನಚಿತ್ರ ವಿಮರ್ಶೆ ಅವಲೋಕನ, ಗ್ರಂಥ ವಿಮರ್ಶೆ ಸಹ ಇರುತ್ತಿತ್ತು.

ವಿಶೇಷ ಸಂದರ್ಭಗಳಲ್ಲಿ ವಿಶೇಷಾಂಕಗಳನ್ನು ಪ್ರಕಟಿಸಲಾಗುತ್ತಿತ್ತು.

ಪಿ.ಆರ್.ರಾಮಯ್ಯ ವಿಶಾಲ ರಾಷ್ಟ್ರೀಯ ಮನೋಭಾವದವರಾಗಿದ್ದರು. ಹಿಂದುಳಿದ, ದಲಿತ ವಿದ್ಯಾರ್ಥಿಗಳ ಏಳಿಗಾಗಿ ಶ್ರಮಿಸಿದ್ದರು. ತರುಣ ಪತ್ರಕರ್ತರಿಗೆ ಉತ್ತೇಜನ ನೀಡುತ್ತಿದ್ದರು. 1947ರಲ್ಲಿ ಸ್ವಂತ ಕಟ್ಟಡದಲ್ಲಿ ನೂತನ ಮುದ್ರಣ ಯಂತ್ರ ಸ್ಥಾಪಿಸಲಾಯಿತು. 1952ರಲ್ಲಿ ರಜತ ಮಹೋತ್ಸವ ಆಚರಿಸಲಾಯಿತು.

ಆದರೆ ಕಾಲಾನಂತರ ಸಾಧನ – ಸಂಪತ್ತು ಬಂಡವಾಳದೊಂದಿಗೆ ಆಧುನಿಕ ರೀತಿಯಲ್ಲಿ, ಪೈಪೋಟಿಯಲ್ಲಿ ಬೇರೆ ಪತ್ರಿಕೆ ಆರಂಭಗೊಂಡಾಗ ಸಹಜವಾಗಿ "ತಾಯಿನಾಡು"ವಿನ ಮೇಲೆ ಪ್ರಭಾವ




ಉಂಟಾಯಿತು. ತನ್ನಿಂದ ಈ ಪೈಪೋಟಿ ಅಸಾಧ್ಯವೆಂದು ಅರಿತು ರಾಮಯ್ಯನವರು ಪತ್ರಿಕಾ ಒಡೆತನ ಬೇರೆಯವರಿಗೆ ಹಸ್ತಾಂತ ರಿಸಿದರು. ಆದರೆ ಆ ಶತಮಾನದಲ್ಲಿ ರಾಮಯ್ಯನವರ ಸಾಧನೆ ಕನ್ನಡ ಪತ್ರಿಕಾರಂಗದ ಇತಿಹಾಸದಲ್ಲಿ ಬಂದು ಪ್ರಮುಖ ಅಧ್ಯಾಯವಾಗಿ ದಾಖಲಾಗಿದೆ.

ರಾಮಯ್ಯನವರು ಬೆಂಗಳೂರು ಕಾರ್ಪೋರೇಷನ್ ಸದಸ್ಯರಾಗಿ ಎರಡು ಅವಧಿಯಲ್ಲಿ ಸೇವೆ ಸಲ್ಲಿಸಿದ್ದರೆ, ಅವರ ಧರ್ಮ ಪತ್ನಿ ಜಯಲಕ್ಷ್ಮಮ್ಮ ಉಪಮೇಯರ್ ಆಗಿ ಸೇವೆ ಸಲ್ಲಿಸಿದವರು.

ಮಹಾತ್ಮ ಗಾಂಧೀಜಿಯವರ ತತ್ವಗಳಿಗೆ ತನ್ನನ್ನು ಅರ್ಪಿಸಿಕೊಂಡು


ಆರ್. ರಾಮಯ್ಯ

ತಾಯಿನಾಡು

ಕಾಶಿಯ ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಬಿ.ಎಸ್.ಸಿ. ಓದುತ್ತಿದ್ದ ರಾಮಯ್ಯ ಗಾಂಧೀಜಿಯವರ ಕರೆಗೆ ಆಕರ್ಷಿತರಾಗಿ ಪರೀಕ್ಷೆಯನ್ನೇ ಕೈಬಿಟ್ಟು 1921ರಲ್ಲಿ ಸ್ವಾತಂತ್ರ ಚಳವಳಿಗೆ ಧುಮುಕಿದವರು. ಸಾಬರಮತಿ ಆಶ್ರಮದಲ್ಲಿ ತರಬೇತಿ ಪಡೆದರು. ಅನಂತರ ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಕಚೇರಿ ಕಲಾಪದಲ್ಲಿ ದುಡಿದು 1922ರಲ್ಲಿ ಬೆಂಗಳೂರಿಗೆ ಹಿಂದಿರುಗಿದರು. ಪತ್ರಿಕಾ ಸುದ್ದಿಗಾರ ರಾದರು. ಗಾಂಧೀಜಿ ಪರ ಸಂಘಟನೆ ಯಲ್ಲಿ ತೊಡಗಿಸಿಕೊಂಡರು. ಪತ್ರಿಕೆಗಳ ಮುದ್ರಣದ ಅನುಭವ ಪಡೆದು 1927 ರಲ್ಲಿ ಮೈಸೂರಲ್ಲಿ ಆರಂಭಿಸಿದರು. ಪತ್ರಿಕೆ ನಂತರ ಬೆಂಗಳೂರಿಗೆ ವರ್ಗಾವಣೆಯಾಯಿತು.

1969ರಲ್ಲಿ ಪಿ.ಆರ್. ರಾಮಯ್ಯನವರಿಗೆ ರಾಜ್ಯ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. 1970ರಲ್ಲಿ ಅವರು ನಿಧನರಾದರು. ಅವರ ಸ್ಮರಣೆಗಾಗಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಪ್ರತಿ ವರ್ಷ ಪತ್ರಿಕೋದ್ಯಮದಲ್ಲಿ ಸಾಧನೆಗೈದವರಿಗೆ ಪಿ.ಆರ್. ರಾಮಯ್ಯ ದತ್ತಿನಿಧಿ ಪ್ರಶಸ್ತಿ ನೀಡುತ್ತಿದೆ.

ಕರ್ನಾಟಕದ ಕಾರ್ಯನಿರತ ಪತ್ರಕರ್ತರ ಸಂಘ (ರಿ) ವತಿಯಿಂದ ರಾಜ್ಯಮಟ್ಟದ ಪಿ.ಆರ್.ರಾಮಯ್ಯ ದತ್ತಿನಿಧಿ ಪ್ರಶಸ್ತಿಗೆ ಶಿಫಾರಸ್ಸು ಮಾಡಿದ ಖಜಾಂಚಿ ಡಾ. ಕೆ. ಉಮೇಶ್ವರ್ , ಆಯ್ಕೆ ಮಾಡಿದ ರಾಜ್ಯ ಅಧ್ಯಕ್ಷ ಶಿವಾನಂದ್ ತಗಡೂರು ಕಾರ್ಯದರ್ಶಿ ಜೆ.ಸಿ. ಲೋಕೇಶ್, ಹಾಗೂ ರಾಜ್ಯ ಪದಾಧಿಕಾರಿಗಳಿಗೆ ಕೃತಜ್ಞತೆಗಳು.

ಕುಂದಪ್ರಭದ ಬಗ್ಗೆ ಮಾಹಿತಿ ರವಾನಿಸಿದ ರಾಜೇಶ್ ಕಾವೇರಿ ಇವರಿಗೆ ವಂದನೆಗಳು. ಕಳೆದ 4 ದಶಕಗಳಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಅನುಭವ ಪಡೆದು ನೂರಾರು ಮಂದಿ ಹಿರಿಯ ಕಿರಿಯ ಪತ್ರಕರ್ತರ ಸ್ನೇಹ ಸಂಬಂಧ ಗಳಿಸಿದ ನನಗೆ ಇದು ಇನ್ನಷ್ಟು ಸಾಧಕ ಪತ್ರಕರ್ತರ ಸಂಪರ್ಕ ಪಡೆಯಲು ಅನುಕೂಲವಾಯಿತು. ಪಿ.ಆರ್. ರಾಮಯ್ಯನವರಂತಹ ಶ್ರೇಷ್ಠ ಪತ್ರಕರ್ತರ ಹೆಸರಲ್ಲಿ ನೀಡುವ ಪ್ರಶಸ್ತಿ ಸ್ವೀಕರಿಸುವುದು ಹೆಮ್ಮೆ ಉಂಟುಮಾಡುತ್ತದೆ.

ಯು.ಎಸ್.ಶೆಣೈ

# ಸಾಧನೆಯ ಹಾದಿಯು ಉತ್ತುಂಗಕ್ಕೇರಲಿ



ಕೋ.ಶಿವಾನಂದ ಕಾರಂತ

ನಾವು 1920 ಕ್ಕೆ ವಿದಾಯ ಹೇಳಿದೆವು. ಅದು ಜಗತ್ತಿನ ಎಲ್ಲರ ಪಾಲಿಗೆ ಕರಾಳ ದಿನಗಳಾಗಿದ್ದವು. ಆ ಮಹಾಮಾರಿ ರೋಗ ಜನ ಸಾಮಾನ್ಯರಿಂದ ಶ್ರೀಮಂತರನ್ನೂ ಕಬಂಧ ಬಾಹುಗಳಿಂದ ಅಪ್ಪಿಕೊಂಡಿತ್ತು. ದೇಶದ ಸಜ್ಜನ ಗಣ್ಯರಾದ ಪ್ರಣಬ್ ಮುಖರ್ಜಿ, ನಾದ ಸಾಮ್ರಾಟ್ ಎಸ್.ಪಿ. ಬಾಲ ಸುಬ್ರಹ್ಮಣ್ಯಮ್ ಇದಕ್ಕೆ ಬಲಿಯಾದರು. ಕವಿ ನಿಸಾರ್ ಅಹಮದ್ ಇಲ್ಲವಾದರು. ಚರಿತ್ರಾ ನಟ ಕೂಡ ಅಸ್ತಂಗತರಾದರು. ಬಡಪಾಯಿ ಶಿಶುಗಳು, ಮಹಿಳೆಯರು, ಗಂಡಸರು ಅನಾಥ, ವಿಧವೆ, ವಿದುರರಾದರು. ಅದೆಂತಹ ಘೋರ ರೋಗವೊ ದೇವಸ್ಥಾನಗಳಲ್ಲಿ ದೇವರನ್ನೂ ಅರೆಸ್ಟ್ ಮಾಡಿದೆವು. ಆದರೆ ಆತ ಮಾಯಾವಿ ನಮ್ಮ ಮನೆ ಮನಮನಗಳಲ್ಲಿ ತನ್ನ ಕೋಟೆಯಲ್ಲಿ ಮಂದಸ್ಮಿತನಾಗಿ ಕುಳಿತು ಸರ್ವಾಲಂಕಾರ ಭೂಷಿತನಾಗಿದ್ದು ನಮ್ಮಿಂದ ಆರತಿಯನ್ನೂ ಬೆಳಗಿಸಿಕೊಂಡ. ಯಾರ ದನಿ ಕೇಳಲಿ, ಯಾರಲ್ಲಿ ಸಂವಹನ ಸಾಧಿಸಲಿ, ಯಾರ ಆರೋಗ್ಯ ಹೇಗೆ? ಹಲವು ರೋಗ ನಿವಾರಕ ವೈದ್ಯರುಗಳು ದಾದಿಯರು ರೋಗಿಗಳ ಉಪಚಾರ ಮಾಡಲು ಹೋಗಿ ತೀರಿಹೋದರು. ಮನುಷ್ಯನಿಗೆ ಸಂತಸದ ಸ್ವರ್ಣರೇಖೆ ಮರೀಚಿಕೆಯಾಯಿತು. ಪ್ರೇಮಿ ದೂರವಾದರು, ವೃದ್ಧರು ಅನಾಥ ಪ್ರಜ್ಞೆಯಿಂದ ನರಳಿದರು. ಸದಾ ಚಲಿಸುವ ವಿಮಾನ, ಬಸ್ಸು, ಕಾರು, ರಿಕ್ಷಾಗಳೂ ಖಾಲಿ ಖಾಲಿ. ನಮ್ಮೆಲ್ಲರ ಬದುಕು ಬರಿದಾದ ಕಾಗದಗಳ ತುಂಡುಗಳಾದವು. ಏನೆಂದು ಬರೆಯಲು ಸಾಧ್ಯ? ಮೊಬೈಲ್, ಫೋನ್‌ಗಳಿಂದ



ಸಂದೇಶ ಬಂದರೂ ಯಾರೂ ಸ್ಪಂದಿಸುತ್ತಿಲ್ಲ ಕೆಟ್ಟ ವಾರ್ತೆ ಇರಬಹುದೆ ಎಂದು. ನ್ಯೂಸ್ ಚಾನೆಲ್‌ಗಳ ಕಿರುಚುವಿಕೆ, ಒಂದು ಸಾವಾದರೆ ನೂರು ಆಗಿವೆ ಎಂಬ ಅವರ ರಂಪಾಟ. ನಾನಂತೂ ಸುದ್ದಿವಾಹಿನಿಗಳನ್ನು ನೋಡುವುದೇ ಬಿಟ್ಟು ಬಿಟ್ಟೆ. ಆದರೆ ದಿನಪತ್ರಿಕೆಗಳು ವಸ್ತುನಿಷ್ಠವಾಗಿ ಬರೆದವು. ಆ ದಿನಗಳಲ್ಲಿ ನಾವು ಹೇಗಿರಬೇಕು ಎನ್ನುವುದಕ್ಕೆ ಆರೋಗ್ಯ ಸೂತ್ರಗಳನ್ನು ಕೊಟ್ಟವು. ಅಂತೂ ಇಂತೂ 2020ಕ್ಕೆ ಬರಬೇಡ ಎಂದರೂ 2021ರಲ್ಲಿ ಎರಡು ಪಟ್ಟು ಹೆಚ್ಚಾದುವು. ತಪ್ಪಿಸಿಕೊಳ್ಳುವುದು ಹೇಗೆ? ನೀನು ನಿರ್ಗಮಿಸು ಎಂದರೆ ಹೋದೆಯಾ ಪಿಶಾಚಿ ಎಂದರೆ ಬಂದೆ ಕಿಟಕಿಯಲ್ಲಿ ಎಂದಿತು. 2020ರ ಸಾಲಿಗೆ ನಾವು ಹೇಳಿದ ಗುಡ್‌ಬೈ ಅಂದರೆ ದೇವರು ನಿನ್ನೊಡನೆ ಇದ್ದಾನೆ ಎಂದರೆ ಇದು ನೋವಿನ ಸಂಕಟವ ಹೇಳಿದ್ದು. ದೇವರ ಸಾನಿಧ್ಯಕ್ಕೆ ನೀನು ತಲುಪಿದ್ದೀಯಾ ಎಂದು, ನಿನ್ನ ಆತ್ಮಕ್ಕೆ ಶಾಂತಿ ಸಿಗಲಿಲ್ಲ. ಆದ್ದರಿಂದ ಪಿಶಾಚಿಯಾಗಿ 2021ರಲ್ಲಿ ಮತ್ತೆ ಕಾಣಿಸಿಕೊಂಡೆ.

ಸಾಮಾನ್ಯವಾಗಿ ಭಾರತೀಯರು, ವಿದಾಯ ಅಂತ ಹೇಳುವುದಿಲ್ಲ. ಮನೆಯಿಂದ ಹೊರ ಹೋಗುವವರಿಗೆ ನಿಮ್ಮ ಪ್ರಯಾಣ ಸುಖಕರವಾಗಲಿ, ಪುನರ್ ದರ್ಶನಾಯ ಎನ್ನುತ್ತಾರೆ.

ಬಂಗಾಳದಲ್ಲಿ ಬಂಧುಗಳಿಗೆ ಹೇಳೋದ. ಅವರ ಭಾಷೆಯಲ್ಲಿ ಮಶಿಮಾ, ಆಳಿ ಕೆನಾನ್? ಅಂದರೆ ಅರ್ಥ ಆಂಟಿ, ನಾನೀಗ ಹೋಗ್ತೇನೆ ಮತ್ತೆ ಬರುತ್ತೇನೆ. ಹಿಂದಿಯಲ್ಲಿ "ಮೈ ಅಭಿ, ಆತೀ ಹೂಂ, ನಾನು ಈಗಲೇ ಹಿಂತಿರುಗುವೆ ತಮಾಷೆ ಎಂದರೆ ಸರ್ ಎಲಿಜಾ ಎಂದೆ ವಾರಣಾಸಿಯಿಂದ ವಾರನ್ ಹೇಸ್ಟಿಂಗ್ಸ್‌ನ ಕುರಿತು ಬರೆಯುತ್ತಾರೆ. "ನೀನು ಕೂಡಲೇ ಹೊರಟು ಹೋಗು ನಿಜವಾಗಿ ಪ್ರಜೆಗಳು ಹೇಳಿದ್ದು ಬೈಗಳದ ರೂಪದಲ್ಲಿ. ಆದರೆ ಮೆಶಾಲೆ ಅದನ್ನು ಅರ್ಥೈಸಿದ ಬಗೆ ಬೇರೆ ಇದು ನಿಜವಾಗಿಯೂ ಅವಮಾನಕಾರಿ , ಒಂದು ರೀತಿಯಿಂದ ಹೇಸ್ಟಿಂಗ್ಸ್ ನೆಗೆದುಬಿದ್ದು ಹೋಗು.

ನಾವು ಚಿಕ್ಕವರಿರುವಾಗ ಸನಾತನ ಸಂಸ್ಕೃತ ಭಾಷೆಯ ಬಗ್ಗೆ ಒಲವಿದ್ದರೂ ಬರೆಯಲಾಗಲಿಲ್ಲ. ಆದರೆ ಸಂಸ್ಕೃತಿಯರು. ಬರಮಾಡಿಕೊಳ್ಳುವುದು.

(3ನೇ ಪುಟಕ್ಕೆ)

ವೈವಿಧ್ಯಮಯ ಕಾರ್ಯಕ್ರಮ ಹಾಗೂ ಭೋಜನ ವ್ಯವಸ್ಥೆಗಾಗಿ

**ವೆಂಕಟಲಕ್ಷ್ಮೀ ಕಲ್ಯಾಣಮಂಟಪ**

**ಅನಂತ ಪದ್ಮನಾಭ ಕಲ್ಯಾಣ ಮಂಟಪ**

ಫೋನ್ : 08254-232470, ಮೊ : 9481754370

ರಾಮಕ್ಷತ್ರೀಯ ಸಮಾಜದ ಸಂಪರ್ಕ ಸೇತುವೆ

15ನೇ ವರ್ಷದ ಸಂಭ್ರಮ – ವಿಶ್ವದಾದ್ಯಂತ ಪ್ರಸರಣ

ಬಿ.ಎಂ.ನಾಥ್ ಬೈಂದೂರು ಸಂಪಾದಕತ್ವದಲ್ಲಿ

**ರಾಮಕ್ಷತ್ರೀಯ** ಮಾಸಪತ್ರಿಕೆ



| ಚಂದಾ ವಿವರ | |
|---|---|
| ವಾರ್ಷಿಕ | – 300/- |
| 2 ವರ್ಷಕ್ಕೆ | – 600/- |
| 3 ವರ್ಷಕ್ಕೆ | – 900/- |
| 4 ವರ್ಷಕ್ಕೆ | – 1200/- |
| ಅಜೀವ ಸದಸ್ಯತ್ವ | – 3000/- |

ರಾಮಕ್ಷತ್ರೀಯ ಮಾಸ ಪತ್ರಿಕೆ

ನಂ.7, ವಿನಾಯಕನಗರ ಮೊದಲನೇ ಮುಖ್ಯರಸ್ತೆ

ಅರವಿಂದ ಲೇಔಟ್,

ಜೆ.ಪಿ.ನಗರ 5ನೇ ಹಂತ, ಬೆಂಗಳೂರು – 560078

ದೂರವಾಣಿ – 9448058010, 98880605160

ಚಂದಾದಾರರಾಗಿ ಸಹಕರಿಸಿ